# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಕೋರಮಂಗಲ ಉಪ-ವಿಭಾಗದ, ಜಕ್ಕಸಂದ್ರ ವಾರ್ಡ್ ಸಂಖ್ಯೆ-173 ದಿನಾಂಕ: 05-06-2021 ರಂದು**

**ಜೂನ್-2021 ಮಾಹೆಯ ವಾರ್ಡ್ ಸಮಿತಿ ಸಭೆಯ ನಡವಳಿಗಳು**

ಶ್ರೀ ಸಂಜೀವ್‌ಕುಮಾರ್, ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 173ರ ರವರ ಅಧ್ಯಕ್ಷತೆಯಲ್ಲಿ ZOOM MEETING ಮುಖಾಂತರ ದಿನಾಂಕ: 05.06.2021 ರಂದು ಬೆಳಗ್ಗೆ 11.30 ಗಂಟೆಗೆ ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳೊಂದಿಗೆ ನಡೆದ ಸಭೆಯ ನಡವಳಿಗಳು:

**ಹಾಜರಿದ್ದ ಸದಸ್ಯರು:-**

1. ಶ್ರೀ ಎಂ.ಕೆ.ಎನ್. ಆಚಾರ್ಯ
2. ಶ್ರೀ ಎಂ.ಎ. ಪೊನ್ನಪ್ಪ
3. ಶ್ರೀ ಕುಸುಮ .ಎಂ
4. ಶ್ರೀ ಮೋಹನ್ ಕುಮಾರ್
5. ಶ್ರೀ ರಾಮಯ್ಯ

**ಹಾಜರಿದ್ದ ಅಧಿಕಾರಿಗಳು:-**

1. ಶ್ರೀ ಪ್ರದೀಪ್ ಕುಮಾರ್, ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು, ವಾರ್ಡ್-173 ಜಕ್ಕಸಂದ್ರ
2. ಶ್ರೀ ನವೀನ್ ಕುಮಾರ್, ಕಿರಿಯ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ
3. ಶ್ರೀ ದಿನೇಶ್, ಪಿ.ಎಸ್.ಐ., ಮಡಿವಾಳ ಸಂಚಾರ ಪೊಲೀಸ್ ಠಾಣೆ

* * * * *

ಶ್ರೀ ಸಂಜೀವ್‌ಕುಮಾರ್, ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 173 ರವರು ZOOM MEETING ಸಭೆಯಲ್ಲಿ ಹಾಜರಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರುಗಳನ್ನು ಹಾಗೂ ವಾರ್ಡ್‌ನ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿದರು ಮತ್ತು ವಾರ್ಡ್ ವ್ಯಾಪ್ತಿಯಲ್ಲಿನ ಕುಂದು ಕೊರತೆಗಳು, ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಚರ್ಚಿಸಲು ತಿಳಿಸಿದರು.

ಶ್ರೀ ಆಚಾರ್ಯರವರು ಮಾತನಾಡಿ, ಕಸದ ಆಟೋ ಟಿಪ್ಪರ್‌ಗಳಲ್ಲಿ ಅಧಿಕವಾಗಿ ಕಸಗಳನ್ನು ತುಂಬಿಸಿಕೊಂಡು, ರಸ್ತೆಯಲ್ಲಿ ಸಂಚರಿಸುವಾಗ ರಸ್ತೆಗಳಲ್ಲಿ ಕಸ ಚೆಲ್ಲುತ್ತಿರುವುದು ಕಂಡು ಬಂದಿರುತ್ತದೆ. ಆದುದರಿಂದ ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು.

ಸಹಾಯಕ ಕಾರ್ಯಪಾಲಕ ಅಭಿಯಂತರರು
ಘನತ್ಯಾಜ್ಯ ವಿಭಾಗ

ಶ್ರೀಮತಿ ಕುಸುಮ ರವರು ಮಾತನಾಡಿ, 13ನೇ ಮುಖ್ಯರಸ್ತೆಯಲ್ಲಿ ಬೀದಿ ದೀಪಗಳನ್ನು ಅಳವಡಿಸಲು ಬೆಸ್ಕಾಂ ರವರು ಹೊಸದಾಗಿ ಕಂಬವನ್ನು ಅಳವಡಿಸಲಾಗಿದ್ದು, ಇದಕ್ಕೆ ದೀಪಗಳನ್ನು ಅಳವಡಿಸಲು ವಿದ್ಯುತ್ ಇಲಾಖೆಗೆ ಕೋರಿದರು.

ಸಹಾಯಕ ಕಾರ್ಯಪಾಲಕ ಅಭಿಯಂತರರು
ವಿದ್ಯುತ್ ವಿಭಾಗ, ದಕ್ಷಿಣ (ಬಿ.ಬಿ.ಎಂ.ಪಿ)

ಶ್ರೀ ರಾಮಯ್ಯ ರವರು ಮಾತನಾಡಿ, ಹೆಚ್.ಎಸ್.ಆರ್ 5ನೇ ಬಡಾವಣೆ, 7ನೇ ಅಡ್ಡರಸ್ತೆ, ಸ್ವತ್ತಿನ ಸಂಖ್ಯೆ.129 ರ ಖಾಲಿ ನಿವೇಶನದಲ್ಲಿ ತುಂಬಾ ತ್ಯಾಜ್ಯಗಳು ಸಂಗ್ರಹಣೆಗೊಂಡಿದ್ದು, ಅಕ್ಕಪಕ್ಕದ ನಿವಾಸಿಗಳಿಗ ಇದರಿಂದ ತೊಂದರೆಯುಂಟಾಗುತ್ತಿರುತ್ತದೆ. ಆದ್ದರಿಂದ ಈ ಬಗ್ಗೆ ಕ್ರಮವಹಿಸಬೇಕೆಂದು ತಿಳಿಸಿದರು.

ಸಹಾಯಕ ಕಾರ್ಯಪಾಲಕ ಅಭಿಯಂತರರು
ಕೋರಮಂಗಲ ಉಪವಿಭಾಗ

ಶ್ರೀ ಪೊನ್ನಪ್ಪ ರವರು ಮಾತನಾಡಿ, ಈ ಕೆಳಕಂಡ ವಿಷಯಗಳ ಬಗ್ಗೆ ಸಭೆಯಲ್ಲಿ ಚರ್ಚಿಸಿದರು.

1. ಹೆಚ್.ಎಸ್.ಆರ್ 5ನೇ ಬಡಾವಣೆಯ 13ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆಗೆ ಕಲ್ವರ್ಟ್ ನಿರ್ಮಿಸಿ, ಮಳೆನೀರು ಸುಗಮವಾಗಿ ಹರಿಯಲು ವ್ಯವಸ್ಥೆ ಕಲ್ಪಿಸಲು ಸಭೆಗೆ ಕೋರಿದರು.
2. 14ನೇ ಮುಖ್ಯರಸ್ತೆಯ ಚರಂಡಿಯು ಹೂಳಿನಿಂದ ತುಂಬಿದ್ದು, ಮಳೆನೀರು ಸುಗಮವಾಗಿ ಹರಿಯದೆ ಇರುವುದರಿಂದ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಲು ತಿಳಿಸಿದರು.
3. ಬಿ.ಡಬ್ಲ್ಯೂ.ಎಸ್.ಎಸ್.ಬಿ. 12ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆಯಲ್ಲಿನ ಒಳಚರಂಡಿ ಸೋರಿಕೆಯನ್ನು ಸರಿಪಡಿಸಬೇಕೆಂದು ತಿಳಿಸಿದರು.
4. ಹೆಚ್.ಎಸ್.ಆರ್ 5ನೇ ಬಡಾವಣೆಯ ಮಳೆ ನೀರು ಚರಂಡಿಯ ನಕ್ಷೆ ಮತ್ತು ನೀರು ಹರಿಯುವ ಮಾರ್ಗದ ವಿವರಗಳನ್ನು ನಕ್ಷೆಯೊಂದಿಗೆ ನೀಡುವಂತೆ, ಕೋರಿದರು.

ಶ್ರೀ ಸಂಜೀವ್ ಕುಮಾರ್, ನೋಡಲ್ ಅಧಿಕಾರಿಗಳು ಮಾತನಾಡಿ, ಮೇ–2021 ರ ಮೊದಲ ವಾರದಲ್ಲಿ ವಾರ್ಡ್‌ನಲ್ಲಿ ಕೋವಿಡ್ ಪ್ರಕರಣದ ಸಂಖ್ಯೆ 28 ಇತ್ತು, ಹಂತ ಹಂತವಾಗಿ ಕೋವಿಡ್ ಪ್ರಕರಣಗಳ ಸಂಖ್ಯೆ ಇಳಿಮುಖವಾಗಿದ್ದು, ಪ್ರಸ್ತುತ ದಿನಾಂಕ 05.06.2021 ರಂದು ಕೇವಲ 1 ಕೋವಿಡ್ ಪ್ರಕರಣ ಕಂಡುಬಂದಿದ್ದು, ಈ ಬಗ್ಗೆ ವಾರ್ಡ್ ಮಟ್ಟದ ಅಧಿಕಾರಿಗಳಾದ ಇಂಜಿನಿಯರ್‌ಗಳು, ಡಾಕ್ಟರ್‌ಗಳು, ವೈದ್ಯಕೀಯ ಸಿಬ್ಬಂಧಿ, ಕಂದಾಯ ಇಲಾಖೆ ಅಧಿಕಾರಿಗಳು, ವಾರ್ಡ್ ಕಮಿಟಿ ಸದಸ್ಯರು ಹಾಗೂ ವಾರ್ಡ್‌ನ ಸ್ವಯಂ ಸೇವಕರು ಹಗಲಿರುಳು ಕೋವಿಡ್ ಮುಕ್ತಗೊಳಿಸಲು ಸಕ್ರಿಯವಾಗಿ ಶ್ರಮಿಸಿರುವುದಕ್ಕೆ ಧನ್ಯವಾದಗಳನ್ನು ಅರ್ಪಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

(ಶ್ರೀ. ಪ್ರದೀಪ್ ಕುಮಾರ್ .ಆರ್)
ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು,
ವಾರ್ಡ್–173 ಜಕ್ಕಸಂದ್ರ

05-06-2021
(ಶ್ರೀ ಸಂಜೀವಕುಮಾರ್)
ನೋಡಲ್ ಅಧಿಕಾರಿಗಳು
ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು
ವಾರ್ಡ್–173 ಜಕ್ಕಸಂದ್ರ